ಹೇಳಿಲ್ಲ, ಆ ವೃತ್ತಿಯಲ್ಲಿ ಇದ್ದುಕೊಂಡು ಜನಪೀಡಕರಾಗಿರುವವರ ಬಗ್ಗೆ ಹೇಳಿದ್ದೇನೆ ಎಂದು ಹೇಳಿದ್ದಾರೆ. ಅದರಲ್ಲಿ ತಮಗೇನು ಅಸಂತೋಷ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ವಕೀಲಿ ವೃತ್ತಿಯ ಬಗ್ಗೆ ಮಾತನಾಡಿದ್ದಾರೆ ಮತ್ತು ಇದರಲ್ಲಿರುವ ಅನೇಕರು ಪ್ರಾಡ್ಯುಲೆಂಟ್ ಎಂದು ಕೆಲವು ವಿಷಯಗಳನ್ನು ಹೇಳಿದ್ದಾರೆ. ಅಂಥಾದ್ದೇನಾದರೂ ಇದ್ದರೆ ಸ್ಪಷ್ಟವಾಗಿ ತಿಳಿಸಲಿ.

ಶ್ರೀ ಹೆಚ್.ವಿಶ್ವನಾಥ್:- ಸುಬ್ಬಾರೆಡ್ಡಿಯವರೇ, ತಮಗೆ ನನ್ನ ಭಾಷೆ ಅರ್ಥವಾಯಿತೇ? ನಾನು ವೃತ್ತಿಯ ಬಗ್ಗೆ ಮಾತನಾಡಿಲ್ಲ, ಕೆಲವರ ಪ್ರವೃತ್ತಿಯ ಬಗ್ಗೆ ಮಾತನಾಡಿದ್ದೇನೆ ಎಂದು ನೀವು ತಿಳಿದುಕೊಳ್ಳಬೇಕು.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ:- ಇದನ್ನು ಎಲ್ಲಾ ವೃತ್ತಪತ್ರಿಕೆಗಳಲ್ಲೂ ಹೈಲೈಟ್ ಮಾಡಿದ್ದಾರೆ. ಈ ಪ್ರೊಫೆಷನ್ ಬಗ್ಗೆ ಬಹಳ ಡೀಗ್ರೇಡ್ ಮಾಡಿದ್ದಾರೆ.

ಅಧ್ಯಕ್ಷರು:- ತಾವು ಆ ರೀತಿ ಹೇಳಿಲ್ಲ ಎಂದು ಅವರು ಜವಾಬ್ದಾರಿಯಿಂದ ಈ ಸದನದಲ್ಲಿ ನಿಂತು ಹೇಳುತ್ತಿದ್ದಾರೆ. ಇಲ್ಲಿಗೆ ಈ ವಿಷಯ ಸಾಕು.

## ೩. ಅರ್ಜಿಗಳನ್ನೊಪ್ಪಿಸುವುದು.

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ತುರುವೇಕೆರೆ): ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರಕ್ಕೆ ಸಂಬಂಧಿಸಿದ ಈ ಕೆಳಕಂಡ ಅರ್ಜಿಗಳನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

(೧) ತುರುವೇಕೆರೆ ತಾಲ್ಲೂಕು ಕಸಬಾ ಹೋಬಳಿ, ಬುಗುಡನಹಳ್ಳಿ ಹಾಗೂ ಅಕ್ಕಪಕ್ಕದ ಗ್ರಾಮಗಳಿಗೆ ರಸ್ತೆ ಸಂಪರ್ಕ ಕಡಿದು ಹೋಗಿರುವುದರಿಂದ, ಸೇತುವೆ ಮತ್ತು ರಸ್ತೆ ಮಾಡಿ ಕೊಡುವ ಬಗ್ಗೆ ಅರ್ಜಿ.

(೨) ತುರುವೇಕೆರೆ ತಾಲ್ಲೂಕು ಮಾರಸಂದ್ರ ಹಾಗೂ ಅಡವನಹಳ್ಳಿ ಮಧ್ಯೆ ಮೊನ್ನೆ ಬಿದ್ದಂಥ ಭಾರೀ ಮಳೆಯಿಂದ ಹಳ್ಳ ನಿರ್ಮಾಣವಾಗಿರುವುದರಿಂದ, ದೊಡ್ಡಹಳ್ಳದ ಸೇತುವೆ ಮತ್ತು ರಸ್ತೆ ನಿರ್ಮಾಣ ಮಾಡಿ ಕೊಡುವ ಬಗ್ಗೆ ಅರ್ಜಿ.

(೩) ತುರುವೇಕೆರೆ ತಾಲ್ಲೂಕು, ದಂಡಿನಶಿವರ ಹೋಬಳಿ, ಸಂಪಿಗೆ ಗ್ರಾಮ ಪಂಚಾಯಿತಿಯ ದೋಣಕೆರೆ ಗ್ರಾಮದಲ್ಲಿ ಮೊನ್ನೆ ಬಿದ್ದ ಭಾರೀ ಮಳೆಯಿಂದ ಹೇಮಾವತಿ ನದಿ ನೀರಿನಲ್ಲಿ ಕೊಚ್ಚಿ ಹೋಗಿರತಕ್ಕಂಥ ಸೇತುವೆಯನ್ನು ನಿರ್ಮಾಣ ಮಾಡುವ ಬಗ್ಗೆ ಅರ್ಜಿ.